# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189–ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ಮೇಲಾಧಿಕಾರಿಗಳ ಕಾಮಗಾರಿ ಪರಿವೀಕ್ಷಣೆ ಸಂಬಂಧ ಸಭೆಗೆ ಹಾಜರಾಗಿರುವುದಿಲ್ಲ ಎಂದು ತಿಳಿಸುತ್ತಾ, ಕಾರ್ಯದರ್ಶಿ/ ಸಹಾಯಕ ಅಭಿಯಂತರರು, ರವರು ದಿನಾಂಕ: 26.11.2021 ಶುಕ್ರವಾರ ರಂದು ಬೆಳಿಗ್ಗೆ 12:30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು 189–ಹೊಂಗಸಂದ್ರ ವಾರ್ಡಿನ ಡಾ|| ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದ್ಯಸರುಗಳು,**
**ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂ. 189, ಹೊಂಗಸಂದ್ರ |
| 2 | ಶ್ರೀ ಬಾಬು ರೆಡ್ಡಿ ಹೆಚ್.ಆರ್ | ಸದಸ್ಯರು |
| 3 | ಶ್ರೀ ಬಿ.ಎಸ್. ಕುಲಕರ್ಣಿ | ಸದಸ್ಯರು |
| 3 | ಶ್ರೀ ಎಂ ಮುನಿರಾಜು | ಸದಸ್ಯರು |
| 4 | ಶ್ರೀ ಗಿರೀಶ್.ಎಸ್ | ಸದಸ್ಯರು |
| 5 | ಶ್ರೀ ಕೆ ಮೋಹನ್ | ಸದಸ್ಯರು |
| 6 | ಶ್ರೀ ಡಾ|| ನಾಗೇಂದ್ರ | MOH, ವೈದ್ಯಾಧಿಕಾರಿ, ಬೊಮ್ಮನಹಳ್ಳಿ ವಲಯ |
| 7 | ಶ್ರೀ ಡಾ|| ರಂಗರಾಜನ್.ಬಿ | ವೈದ್ಯರು (ಪ್ರ.ಆ.ಕೇ), ಹೊಂಗಸಂದ್ರ |
| 8 | ಶ್ರೀಮತಿ ರಕ್ಷಿತಾ.ಎಲ್ | ವೈದ್ಯರು |
| 9 | ಶ್ರೀ ಸಂತೋಷ ಪ್ರಸಾದ್.ಎಮ್ | ಸಹಾಯಕ ಅಭಿಯಂತರರು,ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 10 | ಶ್ರೀ ರಮೇಶ್.ಡಿ | ಸಹಾಯಕ ಅಭಿಯಂತರರು, ವಿದ್ಯುತ್ |
| 11 | ಶ್ರೀ ಚಂದನ್.ಕೆ | ಕಿರಿಯ ಅಭಿಯಂತರರು, ಬೆಸ್ಕಾಂ |
| 12 | ಶ್ರೀ ಹೆಚ್. ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ. 189 |
| 13 | ಶ್ರೀ ವಿನೋದ್ ಕುಮಾರ್.ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು ವಾ.ಸಂ. 189 |
| 14 | ಶ್ರೀ ರಾಮಕೃಷ್ಣ.ಆರ್ | ಕಂದಾಯ ನಿರೀಕ್ಷಕರು, ವಾ.ಸಂ. 189 ಹೊಂಗಸಂದ್ರ |
| 15 | ಶ್ರೀಮತಿ ಅಶ್ವಿನಿ | pharmacist |
| 16 | ಶ್ರೀಮತಿ ಜ್ಯೋತಿ | ಸ್ಟಾಫ್ ನರ್ಸ್ |

ವಾರ್ಡ್ ಕಾರ್ಯದರ್ಶಿ/ಸಹಾಯಕ ಅಭಿಯಂತರರು ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು. ಎಲ್ಲಾ ಅಧಿಕಾರಿ/ಸಿಬ್ಬಂದಿಯವರು ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ಸದಸ್ಯರುಗಳು ತಿಳಿಸುತ್ತಾ, ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ ಸಭೆಯನ್ನು ಕಾರ್ಯದರ್ಶಿ/ಸಹಾಯಕ ಅಭಿಯಂತರರು ರವರು ಪ್ರಾರಂಭಿಸಿದರು.

Scanned with

- **ಆರೋಗ್ಯ ಇಲಾಖೆ (ಕೋವಿಡ್-19):**

1. ಶ್ರೀ ಡಾ॥ ರಂಗರಾಜನ್.ಬಿ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಲಸಿಕೆ ನೀಡಿರುವ ಬಗ್ಗೆ ವಿವರಿಸುತ್ತಾ, ಇದುವರೆಗೂ ಒಟ್ಟು 56,170 ಲಸಿಕೆಗಳನ್ನು ನೀಡಲಾಗಿದ್ದು, ದಿನಾಂಕ: 12.11.2021 ರಿಂದ 26.11.2021 ರವರೆಗೆ

   Covishield – ಒಟ್ಟು 226 1ನೇ ಡೋಸ್ ಲಸಿಕೆಗಳನ್ನು
   ಒಟ್ಟು 1742 2ನೇ ಡೋಸ್ ಲಸಿಕೆಗಳನ್ನು

   Covaxine– ಒಟ್ಟು 112 1ನೇ ಡೋಸ್ ಲಸಿಕೆಗಳನ್ನು
   ಒಟ್ಟು 216 2ನೇ ಡೋಸ್ ಲಸಿಕೆಗಳನ್ನು ನೀಡಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಡಾ॥ ರಂಗರಾಜನ್.ಬಿ, ವೈದ್ಯರು ರವರು ಸಭೆಗೆ ತಿಳಿಸಿದರು.

2. ಶ್ರೀ ಡಾ॥ ರಂಗರಾಜನ್.ಬಿ ರವರು ವಾರ್ಡ್ ವ್ಯಾಪ್ತಿಯಲ್ಲಿ ದಿನಾಂಕ: 12.11.2021 ರಿಂದ 26.11.2021 ರವರಿಗೆ ಕೋವಿಡ್ ಪರೀಕ್ಷೆ ನೀಡಿರುವ ಬಗ್ಗೆ ವಿವರಿಸುತ್ತಾ

   RTPCR – ಒಟ್ಟು 1785 ಪರೀಕ್ಷೆ ಮಾಡಲಾಗಿದ್ದು
   ಒಟ್ಟು 08 ಕೋವಿಡ್ ಪ್ರಕರಣವು ವರದಿಯಾಗಿರುತ್ತದೆ.
   ಒಟ್ಟು 06 ಸೋಂಕಿತರವರನ್ನು HI's ಇದ್ದಾರೆ
   ಒಟ್ಟು 02 ಸೋಂಕಿತರವರು ಸರಿಯಾಗಿ ಪ್ರತಿಕ್ರಿಯಿಸುತ್ತಿಲ್ಲವೆಂದು ಸಭೆಗೆ ತಿಳಿಸಿದ್ದರು

   Rapid – ಒಟ್ಟು 83 ಪರೀಕ್ಷೆ ಮಾಡಲಾಗಿರುತ್ತದೆ ಎಂದು ಸಭೆಯಲ್ಲಿ ಹಾಜರಿದ್ದ ಡಾ॥ ರಂಗರಾಜನ್.ಬಿ, ವೈದ್ಯರು ರವರು ಸಭೆಗೆ ತಿಳಿಸಿದರು.

3. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು 3600 ಜನರು ಇದುವರೆಗೂ ಒಂದು ಲಸಿಕೆಯನ್ನು ಪಡೆದಿರುವುದಿಲ್ಲವೆಂದು ಸರ್ವೆಯಲ್ಲಿ ಕಂಡು ಬಂದಿದ್ದು, ಈ ಬಗ್ಗೆ ಮನೆ-ಮನೆಗಳಿಗೆ ತೆರಳಿ ಲಸಿಕೆಯನ್ನು ಯಾವ ಕಾರಣದಿಂದ ನಿರಾಕರಿಸುತ್ತಿರುತ್ತಾರೆ ಹಾಗೂ ಸದರಿಯವರಿಗೆ ಲಸಿಕೆಯನ್ನು ಪಡೆಯಲು ಮನವರಿಕೆ ಮಾಡಿ ವಿವರವನ್ನು ಪಡೆದುಕೊಂಡು ಬರಲಾಗಿದೆ ಇಂದು ಸಭೆಯಲ್ಲಿ ಹಾಜರಿದ್ದ ಡಾ॥ ರಂಗರಾಜನ್.ಬಿ ವೈದ್ಯರು ರವರು ಸಭೆಗೆ ತಿಳಿಸಿದರು.

4. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಕೋವಿಡ್ ಪ್ರಕರಣದಿಂದ ಎಷ್ಟು ಸಾವು ಸಂಭವಿಸಿದೆ ಹಾಗೂ ಎಷ್ಟು ಕುಟುಂಬಗಳಿಗೆ ಪರಿಹಾರವನ್ನು ನೀಡಲಾಗಿರುವ ಮಾಹಿತಿಯನ್ನು ಕ್ರೋಢೀಕರಿಸಿ ನೀಡಲು ಶ್ರೀ ಬಾಬು ರೆಡ್ಡಿ ಹೆಚ್.ಆರ್ ಸದ್ಯಸರು ರವರು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡಲಾಗುವುದೆಂದು ಶ್ರೀ ಡಾ॥ ನಾಗೇಂದ್ರ MOH, ವೈದ್ಯಾಧಿಕಾರಿ, ಬೊಮ್ಮನಹಳ್ಳಿ ವಲಯ ರವರು ಸಭೆಗೆ ತಿಳಿಸಿದರು.

5. ವಾರ್ಡ್ ವ್ಯಾಪ್ತಿಯಲ್ಲಿ ಪ್ರಥಮಿಕ ಆರೋಗ್ಯ ಕೇಂದ್ರ, ಸರ್ಕಾರಿ ಶಾಲೆಯ ಆವರಣ, ಕಸ ಸುರಿಯುವ ಪಾಯಿಂಟ್, ವಾರ್ಡ್ ಪ್ರದೇಶದ ರಸ್ತೆಗಳಲ್ಲಿ ಮತ್ತು ಮೋರಿಗಳಲ್ಲಿ Bleaching Powder ಅನ್ನು ಹಾಕುವಂತೆ ಶ್ರೀ ಬಾಬು ರೆಡ್ಡಿ, ಸದ್ಯಸರು ರವರು ಸಭೆಯ ಗಮನಕ್ಕೆ ತಂದಿದ್ದು, ಈ ಬಗ್ಗೆ ಶ್ರೀ ಡಾ॥ ನಾಗೇಂದ್ರ MOH, ವೈದ್ಯಾಧಿಕಾರಿ, ಬೊಮ್ಮನಹಳ್ಳಿ ವಲಯ ರವರು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡಲಾಗುವುದೆಂದು ಸಭೆಗೆ ತಿಳಿಸಿದರು.

- **ಕಂದಾಯ:-**

3. ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಎಷ್ಟು ಕಂದಾಯ ವಸೂಲಾತಿಯಾಗಿರುತ್ತದೆ ಎಂದು ಶ್ರೀ ಎಂ ಮುನಿರಾಜು ಸದ್ಯಸರು ರವರು ಸಭೆಯಲ್ಲಿ ಪ್ರಸ್ತಾಪಿಸಿದರು, ಈ ಬಗ್ಗೆ ರಾಮಕೃಷ್ಣ. ಆರ್ ಕಂದಾಯ ನಿರೀಕ್ಷಕರು, ಹೊಂಗಸಂದ್ರ ರವರು ಒಟ್ಟಾರೆಯಾಗಿ ಇಲ್ಲಿಯವರೆಗೂ.

| | | | | | | | |
|---|---|---|---|---|---|---|---|
| Demand | - | 16.76 Lakhs | Collection | - | 09.26 Lakhs | Outstanding - | 5.99 Lakhs |
| Arrears | - | 6.16 Lakhs | Arrears | - | 1.97 Lakhs | Arrears - | 3.76 Lakhs |
| Current year | - | 10.60 Lakhs | Current year | - | 7.29 Lakhs | Current year - | 2.23 Lakhs |

(ಪು.ತಿ.ನೋ)

Scanned with

- **ಬೃಹತ್ ಮಳೆನೀರು ಗಾಲುವೆ :-**

  1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಚರಂಡಿಗಳಲ್ಲಿ ಹೂಳೆತ್ತಲು ಶ್ರೀ ಬಾಬು ರೆಡ್ಡಿ, ಶ್ರೀ ಗಿರೀಶ್ ಎಸ್ ಸದ್ಯಸರು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಕಾರ್ಯದರ್ಶಿ ರವರು ಸಂಬಂಧಪಟ್ಟ ಅಧಿಕಾರಿಗೆ ಸೂಚನೆ ನೀಡಲಾಗುವುದೆಂದು ಸಭೆಗೆ ತಿಳಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ. –**

  1. ಹಿಂದಿನ ಸಭೆಯ ದಿನಾಂಕ: 27-10-2021 ರಂದು ಚರ್ಚಿಸಿರುವ ವಿಷಯದ ಬಗ್ಗೆ, ಇಂದಿನ ಸಭೆಯಲ್ಲಿ ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಸನ್ಮಾನ್ಯ ಶಾಸಕರಾದ ಶ್ರೀ ಎಂ ಸತೀಶ್ ರೆಡ್ಡಿ ರವರ ಮನೆ ಹಿಂಭಾಗ ಸ್ಯಾನಿಟರಿ ಕಾಮಗಾರಿಗೆ ಸ್ಥಳ ಪರಿಶೀಲಿಸಲಾಗಿದ್ದು ದೊಡ್ಡದಾದ ಪೈಪ್‌ನ್ನು ಅಳವಡಿಸಬೇಕಾಗಿದ್ದು ಶೀಘ್ರದಲೇ ಕಾಮಗಾರಿಯನ್ನು ಕೈಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ಸಂತೋಷ ಪ್ರಸಾದ್, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ ರವರು ಸಭೆಯಲ್ಲಿ ತಿಳಿಸಿದ್ದರು.

- **ಬೆಸ್ಕಾಂ**

  2. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ 7ನೇ ಮುಖ್ಯ ರಸ್ತೆ ಹೆಚ್.ಡಿ.ಎಫ್.ಸಿ ಎಟಿಎಂ ರಸ್ತೆಯಲ್ಲಿ ಹಾದುಹೋಗಿರುವ ಬೆಸ್ಕಾಂ ಮಾರ್ಗವು ಮರಗಳ ಕೊಂಬೆಗಳಿಗೆ ಸ್ಪರ್ಶಿಸಿಸುತ್ತಿದ್ದು ಇದನ್ನು ಪರಿಶೀಲಿಸಿ ತೆರವುಗೊಳಿಸಲು ಶ್ರೀ ಬಾಬು ರೆಡ್ಡಿ, ಸದಸ್ಯರು ರವರು ಸಭೆಯಲ್ಲಿ ತಿಳಿಸಿದ್ದು, ಸಭೆಯಲ್ಲಿ ಹಾಜರಿದ್ದ ಶ್ರೀ ಚಂದನ್.ಕೆ, ಕಿರಿಯ ಅಭಿಯಂತರರು, ರವರು ಕ್ರಮವಹಿಸುದಾಗಿ ಸಭೆಯಲ್ಲಿ ತಿಳಿಸಿದ್ದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿಗಳ ಅನುಪಸ್ಥಿಯಲ್ಲಿ ಕಾರ್ಯದರ್ಶಿಗಳು/ಸಹಾಯಕ ಅಭಿಯಂತರರು ರವರು ವಾರ್ಡ್ ಸಮಿತಿ ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with